**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**ಸಿ.ಸಿ.ನಂ. 537/2017**

**ಪಿರ್ಯಾದಿದಾರರುಃ ಸರ್ಕಾರದ ಪರವಾಗಿ : ಕೊಪ್ಪ ಪೋಲೀಸರು**

**ಆರೋಪಿ:** ಅನೂಪ ಬಿನ್ ಪ್ರಕಾಶ, 19 ವರ್ಷ, ವಾಸ ಉಪ್ಪಿನಗದ್ದೆ, ಕುಂಚೂರು ಗ್ರಾಮ, ಕೊಪ್ಪ ತಾಲ್ಲೂಕು.

**ಆರೋಪಣೆ**

ದಿನಾಂಕ 10.04.2017 ರಂದು ರಾತ್ರಿ 09.10 ಗಂಟೆ ಸಮಯದಲ್ಲಿ ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ಕೊಪ್ಪ ಪಟ್ಟಣದ ಮೇಲಿನಪೇಟೆ ವೀರಭದ್ರಸ್ವಾಮಿ ದೇವಸ್ಥಾನದ ಬಳಿ ಚಾಸಾ.1 ನಾಗರಾಜ್ ಶೇಠ್ ಮತ್ತು ಚಾಸಾ.2 ಗುರುಪ್ರಸಾದ್ ಶೇಠ್ ರವರು ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-18/ಇ-4834 ಮೋಟಾರ್ ಸೈಕಲನ್ನು ಮಾನವ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ದುಡುಕಿನಿಂದ ಹಾಗೂ ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಚಾಸಾ.1 ಮತ್ತು ಚಾಸಾ.2 ರವರಿಗೆ ಡಿಕ್ಕಿ ಹೊಡೆಸಿ ಅಪಘಾತವನ್ನುಂಟು ಮಾಡಿದ್ದೀರಿ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾ. ದಂ. ಸಂ. ಕಲಂ **279 ರ** ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡಂತೆ ಅಪಘಾವನ್ನುಂಟು ಮಾಡಿದ ಪರಿಣಾಮ ಚಾಸಾ.2 ರವರಿಗೆ ಎಡಗಾಲಿಗೆ ಪೆಟ್ಟಾಗಿ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾ. ದಂ. ಸಂ. ಕಲಂ **337 ರ** ಅಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡಂತೆ ಅಪಘಾವನ್ನುಂಟು ಮಾಡಿದ ಪರಿಣಾಮ ಚಾಸಾ.1 ರವರ ಎಡಕಾಲಿಗೆ ಪೆಟ್ಟಾಗಿ ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಇದರಿಂದಾಗಿ ಈ ನಿಮ್ಮ ಕೃತ್ಯವು ಭಾ. ದಂ. ಸಂ. ಕಲಂ **338 ರ** ಅಡಿಯಲ್ಲಿ

ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು ಆರೋಪಣೆ ಹೊರಿಸಲಾಗಿದೆ.

ಮೇಲಿನ ಆರೋಪಣೆಯನ್ನು ಓದಿ ವಿವರಿಸಿದ್ದು ಅರ್ಥವಾಯಿತೇ?

**ತಿಳಿಯಿತು**.

ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

**ವಿಚಾರಣೆಯಾಗಬೇಕು.**

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ವಿವರಿಸಿ, ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ 16.10.2025

ಸಹಿ/- 16.10.2025.
(ಶ್ರೀಮತಿ ನಂದಿನಿ ಎಂ.ಎನ್. )
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.